

ಸಿಗಂದೂರು ಸೇತುವೆ
ಚಿತ್ರ: ಫಕ್ರುದ್ದೀನ್ ಎಚ್.

# ಹೊಳೆಬಾಗಿಲ ಹೆಬ್ಬಾಗಿಲಿಗೆ ಬಂತು ಹೊಸ ಸೇತುವೆ

**ಲಿಂಗನಮಕ್ಕಿ ಜಲಾಶಯದ ಶರಾವತಿ ಒಡಲಲ್ಲಿ ಮುಳುಗದೆ ಆದರ ಕಿಬ್ಬೊಟ್ಟೆಯ ಮರೆಯಲ್ಲಿ ನಲುಗಿದ್ದ ಹೊಳೆಬಾಗಿಲಿನ ಹೆಬ್ಬಾಗಿಲಿಗೂ ಸಿಗಂದೂರಿನ ಚೌಡೇಶ್ವರಿಯ ನೆಲೆಗೂ ತೂಗು ಸೇತುವೆಯ ಸಂಬಂಧದ ಬೆಸುಗೆ ಹರ್ಷದ ಕಡಲಲ್ಲಿ ತೇಲಿಸಿದೆ.**

■ ರಾಘು

'ಎಚ್ಚರಿಕೆ, ಸಿಗಂದೂರು ಚೌಡೇಶ್ವರಿ ದೇವಿಗೆ ಹರಕೆ ಹೊತ್ತಿದ್ದೇವೆ, ಕಳವು ಮಾಡಬೇಡಿ' ಹೀಗೊಂದು ಫಲಕ ಹೊಲ–ಮನೆಗಳಲ್ಲಿ ಸಾರ್ವಜನಿಕವಾಗಿ ಕಾಣುವಂತೆ ನೇತಾಡುವುದನ್ನು ಕಂಡಿರುತ್ತೇವೆ. ಅದು ಮಲೆನಾಡಿನ ಸೆರಗಿನ ಅಂಚಿನಲ್ಲಿರುವ ಚೌಡೇಶ್ವರಿ ದೇವಿಯ ಪ್ರಭಾವಳಿಯನ್ನು ಹೇಳುತ್ತದೆ. ಉತ್ತರಕನ್ನಡದ ಕರಾವಳಿಗೆ ಹೊಂದಿಕೊಂಡಿರುವ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಚೌಡಮ್ಮ ಶಕ್ತಿದೇವಿ, ನ್ಯಾಯದೇವಿ ಎನ್ನುವ ಭಾವದಲ್ಲಿ ಜನಮಾನಸದಲ್ಲಿ ನೆಲೆಗೊಂಡಿದ್ದಾಳೆ. ಹಾಗಾಗಿ ಆ ತಾಯಿಯನ್ನೆ ಹೊಲಗದ್ದೆ, ಆಸ್ತಿಪಾಸ್ತಿಯ ರಕ್ಷಕಿಯನ್ನಾಗಿ ಮಾಡಿಕೊಂಡಿದ್ದಾರೆ.

ಚೌಡೇಶ್ವರಿ ಖ್ಯಾತಿಯ ಸಿಗಂದೂರು ನಿಸರ್ಗ ರಮಣೀಯ ತಾಣ. ಭೌಗೋಳಿಕ ವಿನ್ಯಾಸ, ಪ್ರಕೃತಿಯ ಸೊಬಗು, ದೇವಿ ಮೇಲಿರುವ ಭಕ್ತಿ, ಇದು ಪ್ರಮುಖ ಯಾತ್ರಾಸ್ಥಳ ಎನ್ನುವಂತೆ ಪ್ರಸಿದ್ಧಿಗೊಳಿಸಿದೆ.

ಹಚ್ಚ ಹಸುರಿನ ಕಾನನದಲ್ಲಿ ಹಾಲ ಹೊಳೆಯಂತೆ ಹರಿಯುವ ಶರಾವತಿ ಹೊನ್ನಾವರದ ಬಳಿ ಅರಬ್ಬಿ ಸಮುದ್ರ ಸೇರುತ್ತಾಳೆ. ಮಳೆಗಾಲದಲ್ಲಿ ಉಕ್ಕಿ ಹರಿಯುವ ಅವಳನ್ನು ಲಿಂಗನಮಕ್ಕಿ ಬಳಿ ಅಣೆಕಟ್ಟು ಕಟ್ಟಿ ನಿಲ್ಲಿಸಿದರು. ಅನೇಕ ಊರು ಕೇರಿಗಳನ್ನು ಆಕೆ ಆವರಿಸಿದ್ದರಿಂದ ಹಲವು ಗ್ರಾಮಗಳು ಮುಳುಗಡೆ ಹೊಂದಿದವು. ತುಮರಿ ಸಿಗಂದೂರು ಆಸುಪಾಸಿನ ಕೆಲವು ಗ್ರಾಮಗಳು ಜಲಾವೃತಗೊಂಡು ಒಂದು ರೀತಿಯಲ್ಲಿ ದ್ವೀಪವಾಗಿ ಉಳಿದವು. ಆನಂತರದ ದಿನಗಳಲ್ಲಿ ದಶದಿಕ್ಕಿನಲ್ಲಿ ಸುಪ್ರಸಿದ್ಧಿಯಾದ ಚೌಡಮ್ಮನ ದರ್ಶನಕ್ಕೆ ಶರಾವತಿ ಹಿನ್ನೀರ ಮೇಲೆ ಸುಮಾರು 2 ಕಿ.ಮೀ. ಸಾಗಬೇಕಾಯಿತು.